ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜು.

98 - ಶ್ರೀ ವಿ.ಎಸ್. ಕರ್ಜಗಿ (ರಾಣೆಬೆನ್ನೂರು) : ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೆಚ್‌ಕೆಡಿಬಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಣೇಬೆನ್ನೂರು ನಗರದಲ್ಲಿ ಕುಡಿಯುವ ನೀರು 10 ರಿಂದ 12 ದಿನಕ್ಕೊಮ್ಮೆ ಬಿಡುತ್ತಿದ್ದುದರಿಂದ ನಾಗರೀಕರು ತೊಂದರೆಗೆ ಒಳಗಾಗಿರುವುದನ್ನು ಪರಿಹರಿಸಲು ಕೂಡಲೇ ಸರ್ಕಾರ ಟ್ಯಾಂಕರಗಳನ್ನು ರಾಣೇಬೆನ್ನೂರು ನಗರಕ್ಕೆ ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?*

ಆ) *ಆಗಿದ್ದಲ್ಲಿ ಎಷ್ಟು ದಿನದಲ್ಲಿ ಪೂರೈಕೆ ಮಾಡಲಾಗುವುದು?*

ಇ) *ರಾಣೇಬೆನ್ನೂರು ನಗರವು ರೈಲ್ವೆ ನಿಲ್ದಾಣಕ್ಕೆ ಹತ್ತಿರ ಇದ್ದು ರೈಲ್ವೆ ಟ್ಯಾಂಕುಗಳಲ್ಲಿ ಸಹ ನೀರನ್ನು ಪೂರೈಕೆ ಮಾಡಲು ಕ್ರಮ ಕೈ ಗೊಳ್ಳಲಾಗುವುದೇ! ಯಾವಾಗ ಸರಬರಾಜು ಮಾಡಲಾಗುವುದೇ?*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಕುಡಿಯುವ ನೀರನ್ನು ಟ್ಯಾಂಕರುಗಳ ಮೂಲಕ ಸರಬರಾಜು ಮಾಡುವ ಪ್ರಸ್ತಾವನೆ ಸದ್ಯಕ್ಕೆ ಇಲ್ಲ. ನೀರಿನ ಬವಣೆಯನ್ನು ತಪ್ಪಿಸಿ ಸಾಕಷ್ಟು ನೀರನ್ನು ಸರಬರಾಜು ಮಾಡಲು ಡೀಜಲ್ ಜನರೇಟರನ್ನು ಖರೀದಿಸಲು ಮಂಜೂರಾತಿ ನೀಡಲಾಗಿದೆ.

ಆ) ಸದ್ಯಕ್ಕೆ ಪ್ರಸ್ತಾವನೆ ಉದ್ಭವಿಸುವುದಿಲ್ಲ.

ಇ) ಸದ್ಯಕ್ಕೆ ಅವಶ್ಯಕತೆ ಇಲ್ಲ.

ಶ್ರೀ ವಿ.ಎನ್. ಕರಜಗಿ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರವಾಗಿ ಕುಡಿಯುವ ನೀರನ್ನು ಟ್ಯಾಂಕರಗಳ ಮೂಲಕ ಸರಬರಾಜು ಮಾಡುವ ಪ್ರಸ್ತಾವನೆ ಸದ್ಯಕ್ಕಿಲ್ಲವೆಂದು ತಿಳಿಸಿದ್ದಾರೆ. ಆದರೆ, ರಾಣೆಬೆನ್ನೂರು ನಗರದಲ್ಲಿ 10-12 ದಿವಸಗಳಿಗೊಮ್ಮೆ ನೀರು ಬಿಡುತ್ತಿದ್ದು, ಅಲ್ಲಿ ಸುಮಾರು 120 ಬೋರವೆಲ್‌ಗಳಿದ್ದು, ಅನೇಕ ಬೋರವೆಲ್‌ಗಳು ನೀರಿಲ್ಲದೆ ಅಥವಾ ವಿದ್ಯುತ್ ಅಭಾವದಿಂದಲೋ ಏನೋ ಹಾಳಾಗಿವೆ. ಆದುದರಿಂದ, ಕುಡಿಯುವ ನೀರನ್ನು ಟ್ಯಾಂಕರಗಳ ಮೂಲಕ ಒದಗಿಸಿಕೊಡಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ಕ್ಷೇಳಿಕೊಳ್ಳುತ್ತಾ, ಇದಲ್ಲದೆ, ಕುಡಿಯುವ ನೀರಿಗಾಗಿ ಸರಬರಾಜು ಮಾಡಲು ಡೀಸೆಲ್ ಜನರೇಟರನ್ನು ಖರೀದಿಸಲು ಮಂಜೂರಾತಿ ನೀಡಲಾಗಿದೆಯೆಂದು ತಿಳಿಸಿರುವುದು ತುಂಬಾ ಸಂತೋಷ. ಡೀಸೆಲ್ ಜನರೇಟರನ್ನು ಕೂಡಲೇ ಒದಗಿಸಿದರೆ ನೀರಿನ ಬವಣೆ ತಪ್ಪುತ್ತದೆ ಮತ್ತು ಟ್ಯಾಂಕರನಿಂದಲೂ ನೀರು ಸರಬರಾಜು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡುವ ಅವಶ್ಯಕತೆಯಿಲ್ಲ. ಏಕೆಂದರೆ, ಡೀಸೆಲ್ ಜನರೇಟರನ್ನು ಖರೀದಿಸುವುದಕ್ಕೆ ಸರ್ಕಾರ

ಈಗಾಗಲೇ ಮಂಜೂರಾತಿ ಕೊಟ್ಟಿದ್ದು, ಡೀಸೆಲ್ ಜನರೇಟರನ್ನು ಖರೀದಿಸಿದ ನಂತರ ನೀರಿನ ಸಮಸ್ಯೆ ಸಾಕಷ್ಟು ಬಗೆಹರಿಯುತ್ತದೆ. ಆ ದೃಷ್ಟಿಯಿಂದ ಟ್ಯಾಂಕರ್ ಇಲ್ಲವೇ ರೈಲ್ ಮುಖಾಂತರ ನೀರನ್ನು ಸರಬರಾಜು ಮಾಡುವ ಅವಶ್ಯಕತೆಯಿಲ್ಲ.

ಶ್ರೀ ವಿ.ಎಸ್. ಕೌಜಲಗಿ : ಡೀಸೆಲ್ ಜನರೇಟರ್ ಬರುವವರೆಗಾದರೂ ಟ್ಯಾಂಕರಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಇನ್ನು ಹದಿನೈದು ದಿವಸಗಳಲ್ಲಿ ಡೀಸೆಲ್ ಜನರೇಟರನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ.

ಕೈಗಾರಿಕೆ ಭೂ ಮಂಜೂರಾತಿ

99 - ಶ್ರೀ ಎಂ.ಜಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈಗಾರಿಕೆಗಳಿಗೆ ಸಂಬಂಧಪಟ್ಟ ಭೂಮಿಯ ಮಂಜೂರಾತಿ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಿರುವುದು ನಿಜವೇ ಹಾಗಿದ್ದಲ್ಲಿ ಅವರಿಗೆ ಎಷ್ಟು ಎಕರೆಯವರೆಗೂ ಮಂಜೂರಾತಿ ಮಾಡಲು ಅಧಿಕಾರ ನೀಡಿದೆ?

ಆ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಪಾತ್ರವೇನು?

ಇ) ಕೊಡಗಿನಲ್ಲಿ ಎಷ್ಟು ಎಕರೆಯನ್ನು ಕೈಗಾರಿಕೆಗಾಗಿ ಮೀಸಲಿಡಲಾಗಿದೆ. ಎಕರೆಗೆ ಎಷ್ಟು ಹಣ ಎಂದು ನಿಗದಿಪಡಿಸಲಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ಇತರ ಜಿಲ್ಲೆಗಳಲ್ಲಿ ಯಾವುದೇ ಪರಿಮಿತಿಯಿಲ್ಲದೆ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಜಮೀನನ್ನು ಹಂಚಿಕೆ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾಮಟ್ಟದ ಏಕ ಗವಾಕ್ಷಿ ನಿಯೋಗಕ್ಕೆ ನೀಡಿದೆ.

ಆ) ಸಾಮಾನ್ಯವಾಗಿ ಕೈಗಾರಿಕೆಗಳಿಗಾಗಿ ಭೂಸ್ವಾಧೀನ ಪಡಿಸಿಕೊಳ್ಳುವುದು ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಿ ಅಲ್ಲಿ ಕೈಗಾರಿಕಾ ಸ್ಥಾಪನೆಗಾಗಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು.

ಇ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕೊಡಗು ಜಿಲ್ಲೆ ಕುಶಾಲ ನಗರದಲ್ಲಿ ಒಂದು ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದೆ. ಅಭಿವೃದ್ಧಿಪಡಿಸಿರುವ ವಿಸ್ತೀರ್ಣವು ರೂ. 1.25 ಲಕ್ಷಗಳಂತೆ ಹಂಚಿಕೆ ದರವನ್ನು ನಿಗದಿಪಡಿಸಲಾಗಿದೆ.